ಎನ್. ವೈದೇಹಿ, ಮೈಸೂರು
ಸಾವಿರಾರು ಜನಕ್ಕೆ ಭವಿಷ್ಯ ಹೇಳುವವನಿಗೆ ತನಗಿರುವ ಅಪಾಯದ ಸುಳಿವು ಇರುವುದಿಲ್ಲವೆ?




ಹ್ಞ! ಅವನ ಭವಿಷ್ಯದ ಬಗ್ಗೆ ಜನರಿಗೆ ಇರುವ ನಂಬಿಕೆ ಅವನಿಗೇ ಇರುವುದಿಲ್ಲವಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು
ಪುತ್ರವ್ಯಾಮೋಹಕ್ಕೂ ಪತ್ರವ್ಯಾಮೋಹಕ್ಕೂ ಏನು ವ್ಯತ್ಯಾಸ?
ಪುತ್ರವ್ಯಾಮೋಹದಿಂದ ವ್ಯಾಸಭಾರತ; ಪತ್ರವ್ಯಾಮೋಹದಿಂದ ಕಾಳಿದಾಸನ ಮೇಘದೂತ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಸಕಲ ಆರೋಗ್ಯ ಸಮಸ್ಯೆಗಳಿಗೂ ಜಾಹೀರಾತುಗಳಿಂದಲೇ ಔಷಧ ಸಿಗುವಾಗ ಆಸ್ಪತ್ರೆಗಳ ವ್ಯಾಪಾರ ಕುಸಿದಿದೆಯೆ?
ಊಹೂಂ. ಅವುಗಳ ಅಡ್ಡಪರಿಣಾಮದಿಂದ ಇವರು ಸಂತು(ದು)ಷ್ಟರಾಗಿದ್ದಾರೆ.

ಎಚ್. ಸಿದ್ದಾರ್ಥ, ಈದು
ಪ್ರತಿಯೊಬ್ಬರ ‘ಮನೆಮಾತು’ ಯಾವುದು?




ಹಿರಿಯರ ಅಗಲಿಸಿದ ಕಣ್ಣು, ಏರಿದ ಹುಬ್ಬು!

ಅನಸೂಯ ಟಿ. ಕೇದಿಗೆಮನೆ
ಮೂಗಿನ ಮೇಲಿನ ಕೋಪಕ್ಕೂ ಮನಸ್ಸಿನಲ್ಲಿರುವ ಕೋಪಕ್ಕೂ ವ್ಯತ್ಯಾಸ?
ಮೂಗಿನ ಮೇಲಿನದು ಇತರರನ್ನು ಸುಡುತ್ತದೆ. ಮನಸ್ಸಿನದು ತನ್ನನ್ನೇ.

ಜಗದೀಶ ಬಿ. ಹೊಸೂರು, ಮೈಸೂರು
ಕೆಲವರು ಹೆಣ್ಣುಮಕ್ಕಳನ್ನು ಗೌರವಿಸುತ್ತಾರೆ. ಆದರೆ ಸಮಾನತೆ ನೀಡುವುದಿಲ್ಲ. ಏಕೆ?
ಕೊಡುವುದಕ್ಕೆ ಅದು ಅವರದಲ್ಲವಲ್ಲ– ಸಮಾನತೆ ಹಕ್ಕು, ದಾನವಲ್ಲ.

ಸೂರ್ಯಪ್ರಕಾಶ್, ಚೆನ್ನಾಗನಹಳ್ಳಿ
ರಾಜಕೀಯದಲ್ಲಿ ‘ಮೌಲ್ಯಾಧಾರಿತ’ ಮತ್ತು ‘ಮಾನವೀಯತೆ’ ಇಂದಿಗೂ ಪ್ರಸ್ತುತವೆ?
ಮೌಲ್ಯಾಧಾರಿತವಂತೂ ಪ್ರಸ್ತುತ. ಪ್ರತಿ ಮಂತ್ರಿಗೂ ಇಂತಿಷ್ಟೇ ರೇಟ್ ಇರುತ್ತದೆ.

ಇ. ಜಯವಂತ ಪೈ, ಕುಂದಾಪುರ
ಗುರು ಇಲ್ಲದ ವಿದ್ಯೆ ಯಾವುದು?
ಎಲ್ಲ ಮೃಗೀಯ ಕ್ರಿಯೆಗಳಿಗೆ ಗುರು ಅನಗತ್ಯ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಹಲವಾರು ಸಂದರ್ಭಗಳಲ್ಲಿ ‘ಹೇಳಿದ್ದು ತಪ್ಪು’ ಎನ್ನುವ ಬದಲು ‘ಸತ್ಯಕ್ಕೆ ದೂರ’ ಎನ್ನುವುದೇಕೆ?
ತಪ್ಪಿಗೂ ದೂರವಿದ್ದು ಅದು ಅರ್ಧಸತ್ಯವಾಗಿರುವುದರಿಂದ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಈ ಜಗತ್ತಿನಲ್ಲಿ ಪರಮ ಸುಖಿ ಯಾರು?
ಧೃತರಾಷ್ಟ್ರನಂತಹ ಮಂತ್ರಿಯ ಮುದ್ದಿನ ಮಗ.

ಮಲ್ಲಿಕಾರ್ಜುನ, ಸುರಧೇನುಪುರ
ಉದ್ಯೋಗಕ್ಕೆ ಅರ್ಜಿ ಹಾಕುವುದು ಹೊಟ್ಟೆಪಾಡಿಗೆ. ಪ್ರಶಸ್ತಿಗೆ ಅರ್ಜಿ ಹಾಕುವುದು?
ಇತರರನ್ನು ಹೊಟ್ಟೆ ಉರಿಸುವ ಪಾಡಿಗೆ.

ಸುಧೀಂದ್ರ, ಬೆಂಗಳೂರು
ಈ ನಡುವೆ ಎಲ್ಲ ಸಿನಿಮಾಗಳ ಟ್ರೈಲರ್ ಹಿಟ್ ಆಗುತ್ತಿವೆಯಂತಲ್ಲ?
ಟ್ರೈಲರ್ ನಂತರದ್ದೆಲ್ಲ ಹಿಟ್ ಅಲ್ಲದೆ ಚೂರ್ಣವಾಗುತ್ತಿವೆಯಂತೆ.

ಕೆ. ರಂಗಸ್ವಾಮಿ, ಬೆಂಗಳೂರು
ಎಲ್ಲರೂ ‘ಸುಧಾ’ ಕೈಗೆ ಸಿಕ್ಕೊಡನೆ ‘ನೀವು ಕೇಳಿದಿರಿ?’ ಹುಡುಕುವುದೇಕೆ?
ತಪ್ಪು ಉತ್ತರ ಹುಡುಕಿ ನನ್ನ ಜನ್ಮ ಜಾಲಾಡುವ ವಿಫಲ ಯತ್ನ ನಡೆಸಲು.

ಬಿದರಹಳ್ಳಿ ವಿಜಯ, ಹಿರೇಹಡಗಲಿ
ಫೀವರ್‌ಗೂ ಫೇವರ್‌ಗೂ ಇರುವ ವ್ಯತ್ಯಾಸವೇನು?
ದಿನಕಳೆದಂತೆ ಫೀವರ್ ಇಳಿಯುತ್ತದೆ; ಫೇವರ್ ಬೆಳೆಯುತ್ತದೆ.

## ವಾರದ ಪ್ರಶ್ನೆ

ಬಿ.ಆರ್. ಉಷಾ, ಕೆನಡಾ
ಗಂಡು ಸನ್ಯಾಸಿಗೆ ಸಾಧು ಅಂತಾರೆ. ಹೆಣ್ಣು ಸನ್ಯಾಸಿಗೆ ಏನಂತಾರೆ?
ಸಾಧುಗಳ ಸಾಧುತ್ವ ಮಾಪನ.

ಅನಂತಪದ್ಮನಾಭ ಎಚ್.ಎಂ. ಮೈಸೂರು
ರಾಜಕಾರಣಿಯು ಹೇಳುವುದನ್ನೆಲ್ಲ ಹೇಳಿ ಕಡೆಯಲ್ಲಿ ‘ಆಫ್ ದ ರೆಕಾರ್ಡ್’ ಎಂದರೆ ಏನು ಮಾಡಬೇಕು?
‘ಅಂತೆ’, ಪ್ರಶ್ನಾರ್ಥಕ ಚಿಹ್ನೆಗಳನ್ನು ಬಳಸಿ ಯಥಾವತ್ತು ದಾಖಲಿಸಬೇಕು.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಧಾರಾವಾಹಿಗಳಲ್ಲಿ ಸಿನಿಮಾ ಗೀತೆಗಳನ್ನು ಹೆಚ್ಚಾಗಿ ಬಳಸುತ್ತಾರಲ್ಲ...?
ನೋಡುಗರಿಗೆ ಬೆಟ್ಟದಷ್ಟು ಕಷ್ಟ ನೀಡಿದ್ದಕ್ಕೆ ಸಾಸಿವೆಯಷ್ಟಾದರೂ ಸುಖ ನೀಡುವ ಸದಾಲೋಚನೆ.

ವಿ. ಹೇಮಂತಕುಮಾರ್, ಬೆಂಗಳೂರು
ನಿಂಬೆಹಣ್ಣಿನ ಬೆಲೆ ಜಾಸ್ತಿಯಾಗಿದೆ. ಹುಳಿ ಹಿಂಡುವವರ ಗತಿಯೇನು?




ಮಾರುವವನಿಗೆ ಕಾಣದಂತೆ ಸಿರಿಂಜಿನಿಂದ ಹುಳಿ ಸೆಳೆದು ಹಂಚುತ್ತಾರೆ.

ನಾರಾಯಣ ಯಾಜಿ, ಶಿರಾಲಿ
ಇನ್ನುಮುಂದೆ ಗೃಹಸ್ಥರೇ ಮಠಾಧೀಶರಾಗೋದು ಸೂಕ್ತ. ಏನಂತೀರಿ?
ಮಠಾಧೀಶನ ಹುದ್ದೆಯನ್ನೂ ನೈನ್ ಟು ಫೈವ್ ಜಾಬ್ ಮಾಡಿ ಕಡಿವಾಣ ತೆಗೆದುಬಿಟ್ಟರೆ ಮತ್ತೂ ಒಳಿತು.

ಹೆಚ್.ವಿ. ಶ್ರೀಧರ್, ಬೆಂಗಳೂರು
ಮಂಡ್ಯ ಸಕ್ಕರೆನಾಡು; ಚಿಕ್ಕಮಗಳೂರು ಕಾಫಿನಾಡು; ಬೆಂಗಳೂರು?
ಫಿಲ್ಟರ್ ಕಾಫಿ ನಾಡು.

■ ರಾಮ್